ಸಾರಿಗೆ ಘಟಕ (ಡಿಪೋ) ಅವ್ಯವಸ್ಥೆ

74 (882); ಶ್ರೀ ಯಾವಗಲ್ ಬಿ.ಆರ್. (ನರಗುಂದ)

ಅ) ನರಗುಂದ ವಿಧಾನ ಸಭಾ ಕ್ಷೇತ್ರ ಪಟ್ಟಣದಲ್ಲಿರುವ ಸಾರಿಗೆ ಘಟಕ (ಬಸ್ ಡಿಪೋ) ಸಂಪೂರ್ಣವಾಗಿ ಅವ್ಯವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ, ಸಾರಿಗೆ ಘಟಕದ ಸಂಪೂರ್ಣ ಪುನರ್ ನಿರ್ಮಾಣ ಕೆಲಸವನ್ನು ಯಾವಾಗ ಕೈಗೊಳ್ಳಲಾಗುವುದು?

ಇ) ನಗರದ ಬಸ್ ನಿಲ್ದಾಣದ ನಿರ್ಮಾಣ ಮತ್ತು ಕಾಂಕ್ರಿಟ್/ ಡಾಂಬರೀಕರಣ ಕಾಮಗಾರಿ ಯಾವಾಗ ಪ್ರಾರಂಭಿಸಲಾಗುವುದು?

ಈ) ನರಗುಂದ ಡಿಪೋದಲ್ಲಿ ಸಂಚರಿಸುತ್ತಿರುವ ಒಟ್ಟು ಬಸ್ಸುಗಳ ಸಂಖ್ಯೆ ಎಷ್ಟು?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಹೌದು

ಆ) 2014–15ನೇ ಸಾಲಿನಲ್ಲಿ ಪುನರ್ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು.

ಇ) ನರಗುಂದ ಬಸ್ ನಿಲ್ದಾಣದ ಡಾಂಬರೀಕರಣವನ್ನು 2009–10 ರಲ್ಲಿ ಮಾಡಲಾಗಿದೆ. ಬಸ್ ನಿಲ್ದಾಣದ ಕಾಂಕ್ರೀಟ್ ಕೆಲಸವನ್ನು 2014–15 ನೇ ಸಾಲಿನಲ್ಲಿ ಪ್ರಾರಂಭಿಸಲಾಗುವುದು.

ಈ) 82 ವಾಹನಗಳು ಸಂಚರಿಸುತ್ತಿವೆ.

ಶ್ರೀ ಬಿ.ಆರ್. ಯಾವಗಲ್: ದಯಮಾಡಿ Bus Stand ಕಟ್ಟಿಕೊಡುವ ಕೆಲಸ ಈ ವರ್ಷದಿಂದ ಪ್ರಾರಂಭ ಮಾಡಬೇಕು.